## 2021-22 ನೇ ಸಾಲಿನ ವಿದ್ಯಾರ್ಥಿ ಪಾಸು ವಿತರಣೆ ಬಗ್ಗೆ.

**ಪ್ರಾಥಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳು(ರಾಜ್ಯ ಪಠ್ಯಕ್ರಮ) ವಿದ್ಯಾರ್ಥಿ ಪಾಸಿನ ಅರ್ಜಿಯನ್ನು ಸಲ್ಲಿಸುವ ಕ್ರಮಗಳು:**

- 2021–22ನೇ ಸಾಲಿನ ವಿದ್ಯಾರ್ಥಿ ಪಾಸಿಗಾಗಿ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲಿಸಬೇಕಾಗಿದ್ದು, ಆನ್‌ಲೈನ್ ಅರ್ಜಿಯು ಬೆಂ.ಮ.ಸಾ.ಸಂಸ್ಥೆಯ ವೆಬ್‌ಸೈಟ್ (https://mybmtc.karnataka.gov.in) ಮತ್ತು ಸೇವಾಸಿಂಧು ಪೋರ್ಟಲ್ (https://serviceonline.gov.in/karnataka) ನಲ್ಲಿ ಲಭ್ಯವಿರುತ್ತದೆ.
- ವಿದ್ಯಾರ್ಥಿಗಳು ವಿದ್ಯಾರ್ಥಿ ಪಾಸಿನ ಆನ್‌ಲೈನ್ ಅರ್ಜಿಯನ್ನು ಕಂಪ್ಯೂಟರ್ ಅಥವಾ ಮೊಬೈಲ್ ಮೂಲಕ ಸಲ್ಲಿಸಬಹುದಾಗಿರುತ್ತದೆ.
- ಒಂದು ವೇಳೆ ಈ ಅವಕಾಶ ಇಲ್ಲದ ವಿದ್ಯಾರ್ಥಿಗಳು ಬೆಂಗಳೂರು–ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಬೆಂಗಳೂರು–ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ರೂ.30/– ಸೇವಾ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.
- ಪ್ರಾಥಮಿಕ, ಪ್ರೌಢಶಾಲಾ (ರಾಜ್ಯ ಪಠ್ಯಕ್ರಮ) ವಿದ್ಯಾರ್ಥಿಗಳು ಹುಟ್ಟಿದ ದಿನಾಂಕ ಮತ್ತು SATS ಸಂಖ್ಯೆಯನ್ನು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸುವುದು. ಇದರಿಂದ ವಿದ್ಯಾರ್ಥಿಗಳ ವಿವರಗಳನ್ನು SATS ಪೋರ್ಟಲ್‌ನಿಂದ ಪಡೆಯಲಾಗುವುದು.
- ವಿದ್ಯಾರ್ಥಿಗಳು ಈ ಕೆಳಕಂಡ ವಿವರಗಳನ್ನು ಮಾರ್ಪಡಿಸಬಹುದಾಗಿರುತ್ತದೆ.
  - □□□□□□
  - □□□□□□□□ – □□□□□□□□
- ಮೇಲ್ಕಂಡ ವಿವರಗಳನ್ನು ಹೊರತುಪಡಿಸಿ, ಇನ್ನಿತರೆ ವಿವರಗಳನ್ನು ಮಾರ್ಪಡಿಸಬೇಕಾದಲ್ಲಿ ವಿದ್ಯಾರ್ಥಿಗಳು ಸಂಬಂಧಿಸಿದ ಶಾಲೆಯ ಅಧಿಕಾರಿಗಳನ್ನು ಸಂಪರ್ಕಿಸುವುದು.
- ವಿದ್ಯಾರ್ಥಿಗಳು ವೆಬ್‌ಸೈಟ್‌ನಲ್ಲಿ ದೊರೆಯುವ ನಿಗದಿತ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ, ಶಾಲೆಯಿಂದ ದೃಢೀಕರಿಸಿ ಆನ್‌ಲೈನ್ ಅರ್ಜಿಯಲ್ಲಿ ಅಪ್‌ಲೋಡ್ ಮಾಡುವುದು.
- ವಿದ್ಯಾರ್ಥಿಗಳು ಅರ್ಜಿಯಲ್ಲಿನ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿ, ಅವಶ್ಯ ದಾಖಲೆಗಳನ್ನು ಸಲ್ಲಿಸಿ ಅಪ್‌ಲೋಡ್ ಮಾಡಿ ಅರ್ಜಿಯನ್ನು ಸಲ್ಲಿಸುವುದು.
- ಒಂದು ದೂರವಾಣಿ ಸಂಖ್ಯೆಯಲ್ಲಿ 3 ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಿದೆ.
- ವಿದ್ಯಾರ್ಥಿಗಳು ಅರ್ಜಿಯಲ್ಲಿನ ಡ್ರಾಪ್‌ಡೌನ್‌ನಲ್ಲಿ ಶಿಕ್ಷಣ ಸಂಸ್ಥೆ ಹಾಗೂ ತರಗತಿಯನ್ನು ಆಯ್ಕೆ ಮಾಡಿಕೊಳ್ಳುವುದು.
- ವಿದ್ಯಾರ್ಥಿಗಳು ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದ ಬಗ್ಗೆ ಮತ್ತು ಅರ್ಜಿಯನ್ನು ಅನುಮೋದಿಸಿದ/ತಿರಸ್ಕರಿಸಿದ ಬಗ್ಗೆ ಅರ್ಜಿಯಲ್ಲಿ ನೀಡಲಾದ ದೂರವಾಣಿ ಸಂಖ್ಯೆಗೆ ಎಸ್.ಎಂ.ಎಸ್ ರವಾನಿಸಲಾಗುವುದು.
- ಸದರಿ ಅರ್ಜಿಗಳನ್ನು ಬೆಂ.ಮ.ಸಾ.ಸಂಸ್ಥೆಯಿಂದ ಪರಿಶೀಲಿಸಿ ಅನುಮೋದಿಸಲಾಗುವುದು/ ತಿರಸ್ಕರಿಸಲಾಗುವುದು.
- ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ನಿರ್ದಿಷ್ಟ ಸ್ವೀಕೃತಿ ಸಂಖ್ಯೆಯೊಂದಿಗೆ ಟ್ರ್ಯಾಕ್ ಮಾಡಬಹುದು.

**ಸಿ.ಬಿ.ಎಸ್.ಇ/ ಐ.ಸಿ.ಎಸ್.ಇ/ ವಿಶೇಷ ಶಾಲೆಗಳು/ ಪಿಯುಸಿ/ ಪದವಿ/ ವೃತ್ತಿಪರ/ ತಾಂತ್ರಿಕ/ ವೈದ್ಯಕೀಯ/ ಸಂಜೆ ಕಾಲೇಜು/ ಪಿಹೆಚ್‌ಡಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಕ್ರಮಗಳು:**

- 2021–22ನೇ ಸಾಲಿನ ವಿದ್ಯಾರ್ಥಿ ಪಾಸಿಗಾಗಿ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲಿಸಬೇಕಾಗಿದ್ದು, ಆನ್‌ಲೈನ್ ಅರ್ಜಿಯು ಬೆಂ.ಮ.ಸಾ. ಸಂಸ್ಥೆಯ ವೆಬ್‌ಸೈಟ್ (https://mybmtc.karnataka.gov.in) ಮತ್ತು ಸೇವಾಸಿಂಧು ಪೋರ್ಟಲ್ (https://serviceonline.gov.in/karnataka) ನಲ್ಲಿ ಲಭ್ಯವಿರುತ್ತದೆ.
- ವಿದ್ಯಾರ್ಥಿಗಳು ವಿದ್ಯಾರ್ಥಿ ಪಾಸಿನ ಆನ್‌ಲೈನ್ ಅರ್ಜಿಯನ್ನು ಕಂಪ್ಯೂಟರ್ ಅಥವಾ ಮೊಬೈಲ್ ಮೂಲಕ ಸಲ್ಲಿಸಬಹುದಾಗಿರುತ್ತದೆ.
- ಒಂದು ವೇಳೆ ಈ ಅವಕಾಶ ಇಲ್ಲದ ವಿದ್ಯಾರ್ಥಿಗಳು ಬೆಂಗಳೂರು–ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಬೆಂಗಳೂರು–ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ರೂ.30/– ಸೇವಾ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.
- ವಿದ್ಯಾರ್ಥಿಗಳು ಅರ್ಜಿಯಲ್ಲಿನ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿ, ಅವಶ್ಯ ದಾಖಲೆಗಳನ್ನು ಸಲ್ಲಿಸಿ ಅಪ್‌ಲೋಡ್ ಮಾಡಿ ಅರ್ಜಿಯನ್ನು ಸಲ್ಲಿಸುವುದು.
- ಒಂದು ದೂರವಾಣಿ ಸಂಖ್ಯೆಯಲ್ಲಿ 3 ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಿದೆ.
- ವಿದ್ಯಾರ್ಥಿಗಳು ಅರ್ಜಿಯಲ್ಲಿನ ಡ್ರಾಪ್‌ಡೌನ್‌ನಲ್ಲಿ ಶಿಕ್ಷಣ ಸಂಸ್ಥೆ ಹಾಗೂ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು.
- ಒಂದು ವೇಳೆ ಶಿಕ್ಷಣ ಸಂಸ್ಥೆ ಹಾಗೂ ಕೋರ್ಸ್‌ಗಳು ಡ್ರಾಪ್‌ಡೌನ್‌ನಲ್ಲಿ ಲಭ್ಯವಿಲ್ಲದೇ ಇದ್ದಲ್ಲಿ, ಶಿಕ್ಷಣ ಸಂಸ್ಥೆಯು ಅಧಿಕೃತ ಇ–ಮೇಲ್ ಐಡಿ ಮೂಲಕ ವಿವರಗಳನ್ನು dtostudentpass@mybmtc.com ಗೆ ಸಲ್ಲಿಸಲು ಕೋರಲಾಗಿದೆ(ಶಿಕ್ಷಣ ಸಂಸ್ಥೆಯ ನೋಂದಣಿ ವಿವರಗಳು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರಿಸಿದೆ)
- ವಿದ್ಯಾರ್ಥಿಗಳು ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದ ಬಗ್ಗೆ ಮತ್ತು ಅರ್ಜಿಯನ್ನು ಅನುಮೋದಿಸಿದ/ತಿರಸ್ಕರಿಸಿದ ಬಗ್ಗೆ ಅರ್ಜಿಯಲ್ಲಿ ನೀಡಲಾದ ದೂರವಾಣಿ ಸಂಖ್ಯೆಗೆ ಎಸ್.ಎಂ.ಎಸ್ ರವಾನಿಸಲಾಗುವುದು.
- ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ನಿರ್ದಿಷ್ಟ ಸ್ವೀಕೃತಿ ಸಂಖ್ಯೆಯೊಂದಿಗೆ ಟ್ರ್ಯಾಕ್ ಮಾಡಬಹುದು.

**ವಿದ್ಯಾರ್ಥಿ ಪಾಸಿನ ಅರ್ಜಿಯನ್ನು ಅನುಮೋದಿಸುವ ಕ್ರಮಗಳು:**

- ಯಶಸ್ವಿಯಾಗಿ ಸಲ್ಲಿಸಲಾದ ವಿದ್ಯಾರ್ಥಿ ಪಾಸಿನ ಅರ್ಜಿಯನ್ನು ಸಂಬಂಧಿಸಿದ ಕಾಲೇಜಿಗೆ ರವಾನಿಸಲಾಗುವುದು.
- ನೋಂದಣಿಯಾದ ಶಿಕ್ಷಣ ಸಂಸ್ಥೆಗಳು ಬೆಂ.ಮ.ಸಾ.ಸಂಸ್ಥೆಯಿಂದ ನೀಡಲಾದ ಯುಸರ್ ಕ್ರೆಡೆನ್‌ಷಿಯಲ್ ಮೂಲಕ ವಿದ್ಯಾರ್ಥಿ ಪಾಸಿನ ಅರ್ಜಿಗಳನ್ನು ಪರಿಶೀಲಿಸಿ ಅನುಮೋದಿಸುವುದು.
- ನೋಡಲ್ ಅಧಿಕಾರಿಗಳು ಅರ್ಜಿಯನ್ನು ಪರಿಶೀಲಿಸಿ ಅನಮೋದಿಸಲು/ ತಿರಸ್ಕರಿಸಲು ಅವಕಾಶ ಕಲ್ಪಿಸಲಾಗಿದೆ.
- □□□□ ಸದರಿ ಅರ್ಜಿಗಳನ್ನು ಬೆಂ.ಮ.ಸಾ.ಸಂಸ್ಥೆಯಿಂದ ಪರಿಶೀಲಿಸಿ ಅನುಮೋದಿಸಲಾಗುವುದು/ ತಿರಸ್ಕರಿಸಲಾಗುವುದು.

**ವಿದ್ಯಾರ್ಥಿ ಪಾಸು ಪಡೆಯುವ ಕ್ರಮಗಳು:**

- ವಿದ್ಯಾರ್ಥಿ ಪಾಸಿನ ಅರ್ಜಿಯನ್ನು ಅನುಮೋದಿಸಿದ ನಂತರ ವಿದ್ಯಾರ್ಥಿಗಳು ಬೆಂ.ಮ.ಸಾ.ಸಂಸ್ಥೆಯ ವೆಬ್‌ಸೈಟ್‌ನಲ್ಲಿ ವೇಳಾಪಟ್ಟಿ ಕಾಲಂನ್ನು ಆಯ್ಕೆ ಮಾಡಿಕೊಂಡು, ಪಾಸು ಪಡೆಯುವ ಬೆಂಗಳೂರು–ಒನ್ ಕೇಂದ್ರ, ದಿನಾಂಕ, ಸಮಯವನ್ನು ನಿಗಧಿಪಡಿಸಿಕೊಳ್ಳುವುದು.
- ಬೆಂಗಳೂರು–ಒನ್ ಕೇಂದ್ರಗಳಲ್ಲಿ ಬೆಳಿಗ್ಗೆ 8.00 ರಿಂದ ಸಂಜೆ 18.30 ರವರೆಗೆ ಎಲ್ಲಾ ದಿನಗಳಲ್ಲಿಯೂ (ರಾಷ್ಟ್ರೀಯ ರಜಾ ದಿನಗಳನ್ನು ಹೊರತುಪಡಿಸಿ) ಪಾಸುಗಳನ್ನು ವಿತರಣೆ ಮಾಡಲಾಗುವುದು.
- ಬೆಂಗಳೂರು–ಒನ್ ಕೇಂದ್ರಗಳ ಪಟ್ಟಿಯು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
- ವಿದ್ಯಾರ್ಥಿಗಳು ನಿಗದಿಪಡಿಸಿಕೊಂಡ ವೇಳಾಪಟ್ಟಿಯಂತೆ ಬೆಂಗಳೂರು–ಒನ್ ಕೇಂದ್ರಗಳಲ್ಲಿ ಸ್ಮಾರ್ಟ್‌ಕಾರ್ಡ್ ಮಾದರಿಯ ವಿದ್ಯಾರ್ಥಿ ಪಾಸನ್ನು ಪಡೆಯಲು ನಿಗದಿತ ಪಾಸಿನ ಮೊತ್ತ, ಶಾಲಾ/ಕಾಲೇಜಿನ ಗುರುತಿನ ಚೀಟಿ ಮತ್ತು ಶುಲ್ಕ ರಸೀದಿಯೊಂದಿಗೆ ಭೇಟಿ ನೀಡುವುದು.
- ವಿದ್ಯಾರ್ಥಿಗಳು ಪಾಸನ್ನು ಪಡೆಯಲು ಬೆಂಗಳೂರು–ಒನ್ ಕೇಂದ್ರಗಳಲ್ಲಿ ಸ್ವೀಕೃತಿ ಸಂಖ್ಯೆಯನ್ನು ತೋರಿಸಬೇಕಾಗಿರುತ್ತದೆ.
- ವಿದ್ಯಾರ್ಥಿ ಪಾಸಿನ ಮೊತ್ತವು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 080–22483777.